**ದಿನಾಂಕಃ 21-11-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಮುಂದುವರೆದ ಮುಖ್ಯ ವಿಚಾರಣೆ: ವಾದಿ ಪರ ವಕೀಲರಾದ ಶ್ರೀ..ಕೆ.ಡಿ.ಬಿ ವಕೀಲರಿಂದಃ**

ಈ ಪ್ರಸ್ತುತ ದಾವೆಯ 6 ರಿಂದ 12 ನೇ ಪ್ರತಿವಾದಿಗಳ ತಂದೆಯಾದ ನಾಗಪ್ಪ ಮಲ್ಲಪ್ಪ ಕುದರಿಹಾಳ ರವರು ತನ್ನ ತಂದೆಯಾದ ಮಲ್ಲಪ್ಪ, ಹಾಗು ಈ ಪ್ರಸ್ತುತ ದಾವೆಯ 1 ನೇ ಪ್ರತಿವಾದಿ ಪ್ರೇಮಾ, 2 ನೇ ಪ್ರತಿವಾದಿ ರಾಜಶೇಖರ, 3 ನೇ ಪ್ರತಿವಾದಿ ಶಿಲ್ಪಾ, 4 ನೇ ಪ್ರತಿವಾದಿ ಅನಿತಾ, 5 ನೇ ಪ್ರತಿವಾದಿ ಲಕ್ಷ್ಮಿ ಹಾಗು ಇತರರ ವಿರುದ್ಧ ಆಸ್ತಿ ವಿಭಾಗಕ್ಕೊಸ್ಕರ ರಾಣೇಬೆನ್ನೂರಿನ ಪ್ರಧಾನ ಕಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಹಾಗು 1 ನೇ ಹೆಚ್ಚುವರಿ ಜೆ.ಎಂ.ಎಫ್.ಸಿ. ನ್ಯಾಯಾಲಯದ ಓ.ಎಸ್ ನಂ.449/2001 ರ ದಾವೆಯನ್ನು ಸಲ್ಲಿಸಿದ್ದರು ಎಂದು ತೋರಿಸಲು ಸದರಿ ದಾವೆಯ ದಾವಾ ಪತ್ರದ ದೃಢಿಕೃತ ಪ್ರತಿಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-24 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿ ಸಲ್ಲಿಸಿದಂತಹ

ಲಿಖಿತ ಪ್ರತಿವಾದ ಪತ್ರದ ದೃಢಿಕೃತ ನಕಲು ಪ್ರತಿಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ–25 ಎಂದು ಗುರುತಿಸಲಾಯಿತು. ಸದರಿ ದಾವೆಯ 14 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಲಿಖಿತ ಪ್ರತಿವಾದ ಪತ್ರವನ್ನು ಅನುಮೋದಿಸಿಕೊಳ್ಳಲು ನೀಡಿರುವ ಮೇಮೋದ ದೃಢಿಕೃತ ನಕಲು ಪ್ರತಿಯನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ–26 ಎಂದು ಗುರುತಿಸಲಾಯಿತು.

ಸದರಿ ದಾವೆಯ ವಾದಿ, 1 ಮತ್ತು 14 ನೇ ಪ್ರತಿವಾದಿಗಳು U/o.23 Rule 3 of CPC ರ ಅಡಿಯಲ್ಲಿ ಸಲ್ಲಿಸಿದ್ದ ರಾಜೀ ಅರ್ಜಿಯ ದೃಢಿಕೃತ ನಕಲನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ–27 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/–

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.